ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು

ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಸಂಸದೀಯ ವ್ಯವಹಾರಗಳ ಸಚಿವರು) ಮಾನ್ಯ ಅಬ್ಕಾರಿ ಸಚಿವರ ಪರವಾಗಿ 2003ರ ಕರ್ನಾಟಕ ಅಬ್ಕಾರಿ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ."

ಅಧ್ಯಕ್ಷರು : ವಿಧೇಯಕವನ್ನು ಮಂಡಿಸಲಾಗಿದೆ (ಅನುಬಂಧ–V)

ಅಧ್ಯಕ್ಷರು : ಇನ್ನು ಮುಂದೆ ಮಾನ್ಯ ಶಿವಣ್ಣನವರ ವಿಧೇಯಕವನ್ನು ಪರ್ಯಾಲೋಚಿಸಲು ತೆಗೆದುಕೊಳ್ಳೋಣ. ಏನಾಗಿದೆ ಅಂದರೆ 3 ಗಂಟೆಗೆ ಪ್ರಾರಂಭ ಮಾಡಿ 6 ಗಂಟೆವರೆಗೂ ನಿಮ್ಮ ಕಾರ್ಯಕ್ರಮವಾಯಿತು. ಸರ್ಕಾರದ ಕಾರ್ಯಕ್ರಮ ಯಾವಾಗ ಮಾಡುವುದು?

ಶ್ರೀ ಶಿವಾನಂದ ಎಸ್. ಪಾಟೀಲ್ (ತಿಕೋಟ) : ಮಾನ್ಯ ಅಧ್ಯಕ್ಷರೆ, ನನಗೆ ಮಧ್ಯಾಹ್ನ ಒಂದು explanation ಕೇಳಲು ಕೊಡಲಿಲ್ಲ. ಇತ್ತೀಚೆಗೆ ನೀವು ಏನೋ ಧರ್ಮರಾಯ ಆಗು ಅಂದರೆ ಧೃತರಾಷ್ಟ್ರ ಆಗುತ್ತಾ ಇದ್ದೀರಿ.

ಅಧ್ಯಕ್ಷರು : ಮೂರುಕಾಲು ಗಂಟೆಯಿಂದ ಬರೀ ತಮ್ಮ ಕಾರ್ಯಕ್ರಮವೇ ಆಗಿದೆ. ಸರ್ಕಾರಿ ಕಾರ್ಯಕ್ರಮವೂ ಏನಾದರು ಮಾಡಬೇಕಲ್ಲಾ.

ಅ) ವಿಧೇಯಕವನ್ನು ಪರ್ಯಾಲೋಚಿದುವುದು ಮತ್ತು ಅಂಗೀಕರಿಸುವುದು

ಕರ್ನಾಟಕ ಸರ್ಕಾರಿ ಉದ್ಯಾನವನಗಳ (ಸಂರಕ್ಷಣೆ) (ತಿದ್ದುಪಡಿ) ವಿಧೇಯಕ, 2003.

ಪರ್ಯಾಲೋಚನಾ ಪ್ರಸ್ತಾವ

+ ಶ್ರೀ ಎಂ. ಶಿವಣ್ಣ (ತೋಟಗಾರಿಕೆ ಸಚಿವರು) : ಮಾನ್ಯ ಅಧ್ಯಕ್ಷರೆ "2003ರ ಕರ್ನಾಟಕ ಸರ್ಕಾರಿ ಉದ್ಯಾನವನಗಳ (ಸಂರಕ್ಷಣೆ) (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾಪವನ್ನು ಮಂಡಿಸಲಾಯಿತು.

ಶ್ರೀ ಎಂ. ಶಿವಣ್ಣ (ತೋಟಗಾರಿಕೆ ಸಚಿವರು) : ಮಾನ್ಯ ಅಧ್ಯಕ್ಷರೆ ಹಾಲಿ ನಮಗೆ ಇರತಕ್ಕಂಥಹ ಕಾಯಿದೆ ರೀತ್ಯಾ ಸರ್ಕಾರದ ತೋಟಗಾರಿಕೆ ಇಲಾಖೆಯಲ್ಲಿ ಇರತಕ್ಕಂತಹ ಉದ್ಯಾನವನಗಳ ಸಂರಕ್ಷಣೆಗಾಗಿ ಇರುವಂತಹದು. ಈಗ ಬೆಂಗಳೂರಿನ ಹೃದಯಭಾಗದಲ್ಲಿರುವಂತಹ ಸೆಂಟ್ರಲ್ ಜೈಲ್ ಯಾವಾಗ ಸ್ಥಳಾಂತರವಾಯಿತೋ ಈ ಖಾಲಿ ಸ್ಥಳವನ್ನು ತೋಟಗಾರಿಕಾ ಇಲಾಖೆ ವ್ಯಾಪ್ತಿಗೆ ತೆಗೆದುಕೊಂಡು ಯಾವುದೇ ಉದ್ದೇಶದಿಂದ ಇದು encroach ಆಗಬಾರದು ಬೇರೆಯವರ ಕೈಗೆ ಹೋಗಬಾರದು ಎಂಬ ಉದ್ದೇಶದಿಂದ ತೋಟಗಾರಿಕಾ ಇಲಾಖೆಗೆ ಹಸ್ತಾಂತರ ಮಾಡಿಕೊಂಡು ಅದನ್ನು ಸಂರಕ್ಷಣೆ ಮಾಡಬೇಕು ಎಂಬ ಉದ್ದೇಶದಿಂದ ಈ ತಿದ್ದುಪಡಿ ತರುತ್ತಾ ಇದ್ದೇವೆ. ಅಂದರೆ ಖಾಲಿ ಜಾಗಗಳನ್ನು ಈಗಿರುವ ಕಾಯಿದೆ ರೀತ್ಯಾ ನಾವು ಅಭಿವೃದ್ಧಿಪಡಿಸುವುದಕ್ಕೆ ಸಾಧ್ಯತೆ ಇಲ್ಲ. ಈ ಖಾಲಿ ಇರುವ ಈ 15 ಎಕರೆ ಪ್ರದೇಶ ಎನಿದೆ ಇದನ್ನು ನಾವು ಇಲಾಖಾ ವ್ಯಾಪ್ತಿಗೆ ತೆಗೆದುಕೊಂಡು ಅಭಿವೃದ್ಧಿಪಡಿಸಬೇಕಾಗಿದೆ. ಮುಂದೆ ಯಾವುದೇ ರೀತಿ ಇದು encroach ಆಗಬಾರದು ಬೇರೆ ಉದ್ದೇಶಗಳಿಗೆ ಹೋಗಬಾರದು ಎಂಬ ಉದ್ದೇಶದಿಂದ ಈ ಸ್ಥಳವನ್ನು ಸಂರಕ್ಷಣೆ ಮಾಡಬೇಕೆಂಬುದು ಸರ್ಕಾರದ ಉದ್ದೇಶವಾಗಿದೆ. ಅದಕ್ಕೋಸ್ಕರ ನಾವು ಉದ್ಯಾನವನಗಳ ವ್ಯಾಪ್ತಿಗೆ ಇದನ್ನು ಈಗ ತರುತ್ತಾ ಇದ್ದೇವೆ. ಹಾಗಾಗಿ ಇದಕ್ಕೆ ಸದನ ಅನುಮತಿ ಕೊಡಬೇಕು ಅಂತ ವಿನಂತಿ ಮಾಡುತ್ತೇನೆ.